## ಜನಪ್ರಿಯತೆಯ ಮದ್ದು

ಸೋಷಿಯಲ್ ಮೀಡಿಯಾದಲ್ಲಿ ಬರುವ ಜನಪ್ರಿಯ ಚಾಲೆಂಜ್‌ಗಳ ಮೂಲ ಸೆಲೆಬ್ರಿಟಿಗಳೇ ಆಗಿರುತ್ತಾರೆ. ಸದಾ ಲೈಮ್‌ಲೈಟ್‌ನಲ್ಲಿ ಇರಬೇಕು, ಅಭಿಮಾನಿಗಳ ಸಂಖ್ಯೆ ಹೆಚ್ಚು ಮಾಡಿಕೊಳ್ಳಬೇಕು ಎಂಬ ಕಾರಣಕ್ಕೆ ಅವರು ಒಂದಲ್ಲ ಒಂದು ಚಾಲೆಂಜ್‌ಗಳಲ್ಲಿ ಪಾಲ್ಗೊಳ್ಳುತ್ತಿರುತ್ತಾರೆ. ಜನರ ಮನದಿಂದ ಮರೆಯಾಗಬಾರದು ಎಂಬ ತುಡಿತವೇ ಸೆಲೆಬ್ರಿಟಿಗಳ ಸೋಷಿಯಲ್ ಮೀಡಿಯಾ ಮಂತ್ರ.

ಜನಸಾಮಾನ್ಯರು ತಮ್ಮ ಅಭಿಮಾನ ತೋರ್ಪಡಿಸಿಕೊಳ್ಳಲು ಇಷ್ಟದ



ನಟ–ನಟರು ಪಾಲ್ಗೊಂಡ ಚಾಲೆಂಜ್‌ಗಳನ್ನು ಅನುಸರಿಸಿ, ಅನುಕರಿಸುತ್ತಾರೆ. ಕೆಲವರು ನೆಟ್‌ವರ್ಕಿಂಗ್ ಚೆನ್ನಾಗಿ ಮಾಡಿಕೊಳ್ಳೋಣ ಎನ್ನುವ ಕಾರಣಕ್ಕೂ ಚಾಲೆಂಜ್‌ಗಳಲ್ಲಿ ಪಾಲ್ಗೊಳ್ಳುತ್ತಾರೆ. ಇದರ ಜೊತೆಗೆ ಟೈಮ್ ಪಾಸ್ ಮಾಡುವುದು, ಖುಷಿ ಅನುಭವಿಸುವ ಉದ್ದೇಶಗಳೂ ಇರುತ್ತವೆ.

**–ಭವ್ಯಾ ವಿಶ್ವನಾಥ್,** ಆಪ್ತ ಸಮಾಲೋಚಕಿ

## ಖುಷಿಗಾಗಿ ಮಾಡ್ತೀನಿ



ನನ್ನ ಜೊತೆಯವರೊಂದಿಗೆ ಬೆರೆಯಲು ಸೋಷಿಯಲ್ ಮೀಡಿಯಾ ಒಂದು ವೇದಿಕೆ. ಚಾಲೆಂಜ್‌ಗಳನ್ನು ಖುಷಿಗಾಗಿ ತೆಗೆದುಕೊಳ್ತೀನಿ. ಅವಳು ಮಾಡಿದ್ಳು ಅಂತ ನಾನು, ನಾನು ಮಾಡಿದ ಅಂತ ಅವನು, ಅವನು ಮಾಡಿದ ಅಂತ ಮತ್ತೊಬ್ಬಳು... ಹೀಗೇ ಚೈನ್ ಬೆಳೆಯುತ್ತಾ ಹೋಗುತ್ತೆ. 'ಅವನೇ ಶ್ರೀಮನ್ನಾರಾಯಣ'ದ ಹ್ಯಾಂಡ್ಸ್ ಅಪ್ ಚಾಲೆಂಜ್, ಡಲ್ಗೋನಾ ಕಾಫಿ ಚಾಲೆಂಜ್ ನಾನು ಮಾಡಿದ್ದೆ. ನನ್ನ ಫ್ರೆಂಡ್ಸ್ ಎಲ್ಲಾ ಇಷ್ಟಪಟ್ಟದ್ರು. ಕೆಫೆಯಲ್ಲಿ ಕಾಫಿ ಕುಡಿಯುವಾಗ ಹೇಗೆ ಡೆಕೊರೇಶನ್ ಮಾಡ್ತಾರೆ ಅನ್ನೋ ಕುತೂಹಲ ಇರ್ತಿತ್ತು. ಅದೇ ಈ ಚಾಲೆಂಜ್ ತಗೊಳ್ಳೋಕೆ ಕಾರಣವಾಗಿದ್ದು.

**–ಪ್ರಜ್ವಲಾ,** ಪತ್ರಿಕೋದ್ಯಮ ವಿದ್ಯಾರ್ಥಿನಿ

## ಗಮನಿಸ್ತೀನಿ, ಒಪ್ಪಿಕೊಳ್ಳಲ್ಲ



ದಿನಕ್ಕೊಂದು ಚಾಲೆಂಜ್ ಹುಟ್ಟಿಕೊಳ್ಳುತ್ತಿರುತ್ತೆ. ನನ್ನನ್ನೂ ಹಲವರು ಟ್ಯಾಗ್ ಮಾಡಿರುತ್ತಾರೆ. ಆದರೆ ನಾನು ಬಹುತೇಕ ಚಾಲೆಂಜ್‌ಗಳಿಗೆ ರೆಸ್ಪಾಂಡ್ ಮಾಡಲು ಹೋಗಲ್ಲ. ಆದರೆ ಬೇರೆಯವರು ಏನು ಮಾಡ್ತಿದ್ದಾರೆ ಅನ್ನೋದನ್ನು ಗಮನಿಸುತ್ತಿರುತ್ತೇನೆ.

ಈಚೆಗೆ ಕವನ ಓದುವ, ಇಷ್ಟದ ಪುಸ್ತಕದ ಕವರ್ ಹಾಕುವ ಚಾಲೆಂಜ್ ಬಂದಿತ್ತು. ನಾನು ಆಸಕ್ತಿಯಿಂದ ಗಮನಿಸಿದೆ. ಕನ್ನಡ ಹಲವು ಹಿರಿಯ ಕವಿಗಳ ಪದ್ಯಗಳ ಪರಿಚಯವಾಯ್ತು. ಪ್ರಕಾಶ್ ಬೆಳವಾಡಿ, ವಿಶ್ವೇಶ್ವರ ಭಟ್, ವಿಜಯ್ ಪ್ರಕಾಶ್ ಥರದವರು ಪದ್ಯಗಳನ್ನು ಓದಿದ್ದರು. ಪುಸ್ತಕದ ಕವರ್‌ಗಳನ್ನು ನೋಡಿ ನಾನೂ ಕೆಲವು ಪುಸ್ತಕಗಳನ್ನು ಖರೀದಿಸಿದೆ.

**–ಪರಿಮಳಾ ಗೌತಮ್,** ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಉದ್ಯೋಗಿ

### ಸ್ಯಾರಿ ಚಾಲೆಂಜ್

ಮಹಿಳೆಯರ ಲೋಕದಲ್ಲಿ ಸದ್ದು ಮಾಡಿದ ಜನಪ್ರಿಯ ಚಾಲೆಂಜ್ ಇದು. ಆಗಾಗ ಮೇಲೆದ್ದು ಬರುತ್ತಲೇ ಇರುತ್ತೆ. ಮಹಿಳೆಯರು ಸೀರೆಯಲ್ಲಿ ಕಂಗೊಳಿಸುವ ಚಿತ್ರಗಳನ್ನು ಪುಂಖಾನುಪುಂಖವಾಗಿ ಪೋಸ್ಟ್ ಮಾಡುತ್ತಾರೆ. ಒಬ್ಬರು ಚಿತ್ರ ಹಾಕಿದ ನಂತರ ಗೆಳತಿಯರನ್ನು ಟ್ಯಾಗ್ ಮಾಡಿ ಅವರಿಗೂ ಚಿತ್ರ ಹಾಕುವಂತೆ ಚಾಲೆಂಜ್ ಮಾಡಬೇಕಿತ್ತು. ಸ್ಯಾರಿ ಚಾಲೆಂಜ್ ಜನಪ್ರಿಯವಾದ ನಂತರ ಪುರುಷರು ಧೋತಿ ಚಾಲೆಂಜ್ ಶುರು ಮಾಡಿದರು. ಅದೂ ಕೆಲ ದಿನಗಳ ಮಟ್ಟಿಗೆ ಸದ್ದು ಮಾಡಿತ್ತು.

### ಕ್ವಾರಂಟೈನ್ ಟ್ರಾವೆಲ್ ಚಾಲೆಂಜ್

ಮನೆಯಲ್ಲಿ ಸಿಲುಕಿರುವ ಜನರು ಲೋಕಯಾತ್ರೆಯ ಬಗ್ಗೆ ಚಿತ್ರಗಳನ್ನು ರಿಕ್ರಿಯೇಟ್ ಮಾಡಿ ಪೋಸ್ಟ್ ಮಾಡಬೇಕಾದ ಚಾಲೆಂಜ್ ಇದು. ಕೆಲವಂತೂ ರೋಚಕವಾಗಿದ್ದವು. ಜನರ ಕಲ್ಪನಾ ಶಕ್ತಿಗೆ ಸಲಾಂ ಹೇಳಬೇಕು ಎನಿಸುವಂತೆ ಇರುತ್ತಿತ್ತು. ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್‌ನಲ್ಲಿ ಈ ಚಾಲೆಂಜ್ ಹೆಚ್ಚು ಸದ್ದು ಮಾಡಿತ್ತು.








ಸಂಬಂಧಿಸಿದ ವಿಚಾರಗಳೇ ಜಾಸ್ತಿಯಿರುತ್ತೆ. ಅದನ್ನು ನೋಡೋರೂ ಅಂಥವರೇ. ಇನ್‌ಸ್ಟಾಗ್ರಾಂನಲ್ಲಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಹೆಚ್ಚು ಸಕ್ರಿಯರಾಗಿದ್ದಾರೆ. ಟಿಕ್‌ಟಾಕ್‌ನಲ್ಲಿ ಅರ್ಲಿ ಟೀನ್ಸ್ ಎನಿಸಿಕೊಳ್ಳುವ 13ರಿಂದ 15ರ ವಯೋಮಾನದವರು ಹೆಚ್ಚು ಕಾಣಿಸುತ್ತಾರೆ' ಎಂದು ವಿಶ್ಲೇಷಿಸುತ್ತಾರೆ ಆಪ್ತ ಸಮಾಲೋಚಕಿ ಭವ್ಯಾ ವಿಶ್ವನಾಥ್.

ಈಚೆಗಷ್ಟೇ ತನ್ನ ಫೇಸ್‌ಬುಕ್ ಪುಟಕ್ಕೆ ಗರಿಷ್ಠ ಫಾಲೋವರ್ಸ್ ಇದ್ದಾರೆ ಎಂದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, 'ಹೌದು ಟ್ರಂಪ್, ನಿಮಗೆ ವಯಸ್ಸಾಯ್ತು ಅನ್ನೋದಕ್ಕೆ ಇದು ಉತ್ತಮ ಉದಾಹರಣೆ' ಎಂದು ಅಲ್ಲಿನ ಜನರು ಛೇಡಿಸಿದ್ದು ಇದೇ ಕಾರಣಕ್ಕೆ.

### ಚಾಲೆಂಜ್‌ಗಳ ಕಥೆಯೇನು?

'ಅಯ್ಯೋ ಅವನಿಂದ ದಿಂಬು ಎತ್ತೋಕೆ ಎಲ್ಲಿ ಆಗುತ್ತೆ, ಅವನಿಗಷ್ಟು ಶಕ್ತಿಯಿಲ್ಲ' ಎಂದು ಐದು ವರ್ಷದ ಮಗುವಿನ ತಾಯಿ ಹೇಳಿದರೆ, ಆ ಮಗು ಕಷ್ಟಪಟ್ಟು ದಿಂಬು ತಂದು, 'ನೋಡಮ್ಮಾ, ನನಗೆ ಶಕ್ತಿಯಿದೆ' ಎಂದು ಬೀಗುತ್ತೆ. ಮಗು ಬೆಳೆದ ಮೇಲೆಯೂ ಅದರೊಳಗಿರುವ ಈ ಸವಾಲು ಸ್ವೀಕರಿಸುವ ಮನಸ್ಥಿತಿ ಬದಲಾಗುವುದಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ದಿನಕ್ಕೊಂದರಂತೆ ಹುಟ್ಟಿಕೊಳ್ಳುವ ಚಾಲೆಂಜ್‌ಗಳ ಹಿಂದಿರುವ ಅತಿಮುಖ್ಯ ತರ್ಕ ಇದು.

ಈಗಂತೂ ಲಾಕ್‌ಡೌನ್ ಕಾಲ.